# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ

ಮಾನ್ಯ ಶ್ರೀ **ನೀಲಪ್ಪ ಈರಪ್ಪ ಹತ್ತಿ,** ಅಧ್ಯಕ್ಷರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಕ್ಷ್ಮೇಶ್ವರ ಇವರ ಅಧ್ಯಕ್ಷತೆಯಲ್ಲಿ 10-09-2020 ರಂದು **ಗುರುವಾರ 11-30 ಗಂಟೆಗೆ** ಜರುಗಿದ ಸಮಿತಿಯ ಸಾಮಾನ್ಯ ಸಭೆಯ ನಡುವಳಿಕೆಗಳು.

**ಸಭೆಗೆ ಹಾಜರಿದ್ದ ಸದಸ್ಯರು**

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ನೀಲಪ್ಪ ಈರಪ್ಪ ಹತ್ತಿ | ಅಧ್ಯಕ್ಷರು |
| 2 | ಶ್ರೀ ಸೋಮಪ್ಪ ಮೇಘಪ್ಪ ಲಮಾಣಿ | ಉಪಾಧ್ಯಕ್ಷರು |
| 3 | ಶ್ರೀ ಗುಡದಯ್ಯ ರಾಮಪ್ಪ ಕೊಪ್ಪದ | ಸದಸ್ಯರು |
| 4 | ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ | ,, |
| 5 | ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ | ,, |
| 6 | ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ | ,, |
| 7 | ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ | ,, |
| 8 | ಶ್ರೀಮತಿ ಪಕ್ಕವ್ವ ಯಲ್ಲಪ್ಪ ಜೋಗಿ | ,, |
| 9 | ಶ್ರೀ ರಾಜಶೇಖರಪ್ಪ ಮಹಾಲಿಂಗಪ್ಪ ಕರೆಣ್ಣವರ | ,, |
| 10 | ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ | ,, |
| 11 | ಶ್ರೀ ಸುರೇಶ ವೀರಭದ್ರಪ್ಪ ಬಳ್ಳಾರಿ | ,, |
| 12 | ಶ್ರೀ ಓಂ ಪ್ರಕಾಶ ಪುಕರಾಜ ಜೈನ್ | ,, |
| 13 | ಶ್ರೀ ಪುಲಕೇಶಿ ಗೂಳಪ್ಪ ಉಪನಾಳ | ,, |
| 14 | ಶ್ರೀ ಶಿವಾನಂದ ಸಂಗಪ್ಪ ನೆಲವಿಗಿ | ,, |
| 15 | ಶ್ರೀಮತಿ ಸವಿತಾ ರಾಜಶೇಖರ ಭಾವಿಕಟ್ಟಿ | ನಾಮ ನಿರ್ದೇಶಿತ ಸದಸ್ಯರು |
| 16 | ಶ್ರೀ ವೀರುಪಾಕ್ಷಪ್ಪ ಮಹದೇವಪ್ಪ ಮೇಟಿ | ,, |
| 17 | ಶ್ರೀ ಚಂದ್ರಶೇಖರ ಮಹದೇವಪ್ಪ ತಳವಾರ | ,, |

**ಸಭೆಗೆ ಹಾಜರಿದ್ದ ಅಧಿಕಾರಿಗಳು**

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಕಾರ್ಯದರ್ಶಿಗಳು, ಕೃಉಮಾಸ, ಲಕ್ಷ್ಮೇಶ್ವರ | ಕಾರ್ಯದರ್ಶಿಯವರು |

**ಸಭೆಗೆ ಗೈರ ಹಾಜರಿದ್ದ ಅಧಿಕಾರಿಗಳು**

| ಅ.ನಂ | ಹೆಸರು | ಹುದ್ದೆ |
|---|---|---|
| 1 | ಮಾನ್ಯ ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಗದಗ. | ಇಲಾಖಾ ಪ್ರತಿನಿಧಿ |

ವಿಷಯ ನಂ-1) ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವ ಕುರಿತು ವಿಚಾರ.

ಠರಾವ ನಂ-1) ದಿನಾಂಕ: 11-08-2020 ರಂದು ಜರುಗಿದ ಸಾಮಾನ್ಯ ಸಭೆಯ ನಡುವಳಿಕೆಗಳನ್ನು ಓದಲಾಯಿತು. ಅವೆಲ್ಲವು ಸರಿ ಇದ್ದುದರಿಂದ ಒಪ್ಪಿ ದೃಢೀಕರಿಸಲಾಯಿತು.

ಸೂಚಕರು: ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ
ಅನುಮೋದಕರು: ಶ್ರೀಮತಿ ಮುತ್ತವ್ವ ಪರಸಪ್ಪ ಮಾಗಡಿ

ವಿಷಯ ನಂ–2) 2020–21 ನೇ ಸಾಲಿನ ಅಗಷ್ಟ ತಿಂಗಳ ಸಮಿತಿಯ ಆದಾಯ, ವೆಚ್ಚದ ಪತ್ರಿಕೆ ಪರಿಶೀಲಿಸಿ ಮಂಜೂರಾತಿ ನೀಡುವ ಕುರಿತು.

ಠರಾವ ನಂ–2) 2020–21 ನೇ ಸಾಲಿನ **ಅಗಷ್ಟ** ತಿಂಗಳ ಈ ಕೆಳಗಿನಂತಿರುವ ಆದಾಯ ಮತ್ತು ವೆಚ್ಚದ ತಃಖ್ತೆಯನ್ನು ಪರಿಶೀಲಿಸಿ ಒಪ್ಪಲಾಯಿತು.

**2020 ನೇ ಸಾಲಿನ ಮೇ ತಿಂಗಳಿನ ಆದಾಯ ವೆಚ್ಚದ ವಿವರಣಾತ್ಮಕ ತ:ಖ್ತೆ**

| ಕ್ರ ಸಂ | ಆದಾಯ | ಮೊತ್ತ | ಕ್ರ ಸಂ | ವೆಚ್ಚ | ಮೊತ್ತ |
|---|---|---|---|---|---|
| 1 | ಅ) ಮಾರುಕಟ್ಟೆ ಶುಲ್ಕ<br>ಬ) ಜಾನುವಾರು ಮಾ.ಶು. | 251786–00<br>733–00 | 1 | ರಾಜ್ಯ ಸಂಚಿತ ನಿಧಿ ವಂತಿಕೆ<br>(ಏಪ್ರೀಲ್ 2020 ರಿಂದ ಮೇ 2020 ತಿಂಗಳ) | 668203–00 |
| | **ಒಟ್ಟು ರೂ.** | **252519–00** | 2 | ಕೃಷಿ ಮಾರಾಟ ಮಂಡಳಿ ವಂತಿಕೆ<br>(ಏಪ್ರೀಲ್ 2020 ರಿಂದ ಮೇ 2020 ತಿಂಗಳ) | 222734–00 |
| 2 | ಶುದ್ಧ ನೀರಿನ ಘಟಕ | 8824–00 | 3 | ಕೃಷಿ ವಿಶ್ವ ವಿದ್ಯಾಲಯ ವಂತಿಕೆ<br>(ಏಪ್ರೀಲ್ 2020 ರಿಂದ ಮೇ 2020 ತಿಂಗಳ) | 44546–00 |
| 3 | ಲೀವ್ & ಲೈಸನ್ಸ್ ಫೀ | 74937–00 | 4 | ಆವರ್ತ ನಿಧಿ ವಂತಿಕೆ<br>(ಏಪ್ರೀಲ್ 2020 ರಿಂದ ಮೇ 2020 ತಿಂಗಳ) | 1764031–00 |
| 4 | ಲೈಸನ್ಸ್ ಫೀ | 21250–00 | 5 | ಭದ್ರತಾ ಸಿಬ್ಬಂದಿ ವೆಚ್ಚ (2020 ಜುಲೈ ತಿಂಗಳ) | 209415–00 |
| 5 | ಫಾರ್ಮ ಫೀ | 2010–00 | 6 | ಅಧ್ಯಕ್ಷರ/ಉಪಾಧ್ಯಕ್ಷರ ಗೌರವ ಧನ | 4500–00 |
| 6 | ದಂಡ | 855–00 | 7 | ಸದಸ್ಯರ ಸಭಾ ಭತ್ಯ, ಪ್ರವಾಸ ಭತ್ಯ & ಸಿಟಿಂಗ್ ಫೀ | 14213–00 |
| 7 | ಇತರೆ | 5010–00 | 8 | ಸಭೆಯ ವೆಚ್ಚ | 3600–00 |
| | | | 9 | ಕಛೇರಿ ನಿರ್ವಹಣೆ | 11550–00 |
| | | | 10 | ಮುದ್ರಣ & ಲೇಖನ ಸಾಮಗ್ರಿ | 2580–00 |
| | | | 11 | ರಾಷ್ಟ್ರೀಯ ಹಬ್ಬ | 2500–00 |
| | | | 12 | ದಿನಪತ್ರಿಕೆ | 300–00 |
| | | | 13 | ಸಾದಿಲ್ವಾರ ವೆಚ್ಚ | 1765–52 |
| | | | 14 | ದೂರವಾಣಿ ವೆಚ್ಚ | 3902–00 |
| | | | 15 | ವಿದ್ಯುತ್ ವೆಚ್ಚ | 46520–00 |
| | **ಒಟ್ಟು ರೂ.** | **3,65,405–00** | | **ಒಟ್ಟು ರೂ.** | **30,00,359–52** |
| | **ಕೊರತೆ** | **26,34,954–52** | | **ಉಳಿತಾಯ** | **–** |
| | **ಅಂತೂ** | **30,00,359–52** | | **ಅಂತೂ** | **30,00,359–52** |

ಸೂಚಕರು: ಶ್ರೀ ಚಂದ್ರಶೇಖರ ಮಹದೇವಪ್ಪ ತಳವಾರ
ಅನುಮೋದಕರು: ಶ್ರೀ ವೆಂಕರಡ್ಡಿ ಬಸವರಡ್ಡಿ ಸ.ಹೊಂಬಳ

ವಿಷಯ ನಂ–3) ಶಿರಹಟ್ಟಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 10 ದಿನಸಿ ಮಳಿಗೆ ನಿರ್ಮಿಸುವ ಕಾಮಗಾರಿಯ ಟೆಂಡರ್ ರದ್ದುಪಡಿಸಿರುವ ಬಗ್ಗೆ.

ಠರಾವ ನಂ–3) ಸನ್ 2017–18 ನೇ ಸಾಲಿನ ವಾರ್ಷಿಕ ಕ್ರೀಯಾ ಯೋಜನೆಯಡಿ ಮಂಜೂರಾದ ಶಿರಹಟ್ಟಿ ಉಪ ಮಾರುಕಟ್ಟೆಯಲ್ಲಿ 10 ದಿನಸಿ ಮಳಿಗೆಗಳ ನಿರ್ಮಾಣ ಕಾಮಗಾರಿಯ ಟೆಂಡರ್‌ನಲ್ಲಿ ಮೊದಲನೇ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರನ್ನು ಹೊರತುಪಡಿಸಿ, ಐದನೇ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಿಗೆ ಟೆಂಡರ್ ಅನುಮೋದನೆ ನೀಡಲು ದಿನಾಂಕ: 13–05–2020 ರ ಸಮಿತಿಯ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿರುವುದು ಸಮಂಜಸವಲ್ಲದ ಕಾರಣ ಹಾಗೂ ಕರ್ನಾಟಕ ಪಾರದರ್ಶಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಅವಕಾಶ ಇಲ್ಲದಿರುವುದರಿಂದ ಸದರಿ ಟೆಂಡರ್‌ನ್ನು ಮಾನ್ಯ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರು ಇವರು ತಮ್ಮ ಆದೇಶ ಪತ್ರ ಸಂಖ್ಯೆ/ಕೃಮಾಇ/ಮಾಅಯೋ/ಅಅ/15222/2020–21 ದಿನಾಂಕ: 27–08–2020 ರಡಿಯಲ್ಲಿ ರದ್ದುಪಡಿಸಿರುವುದನ್ನು ಕಾರ್ಯದರ್ಶಿ–ಯವರು ಸಭೆಗೆ ವಿವರಿಸಿದರು.

ಈ ಕುರಿತು ಸಮಿತಿಯ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು, ಸಮಿತಿಯ ಪ್ರಸ್ತುತ ಹಣಕಾಸಿನ ಸ್ಥಿತಿಯು ಸದೃಢವಾಗಿದ್ದು, ಸದರಿ ಕಾಮಗಾರಿ ಕೈಕೊಳ್ಳುವುದರಿಂದ ಮುಂದಿನ ದಿನ ಮಾನಗಳಲ್ಲಿ ಸಮಿತಿಗೆ ಆದಾಯವಾಗಬಹುದೆಂಧು ಸಭೆಯಲ್ಲಿ ಮನಗಂಡು, ಸದರಿ ಕಾಮಗಾರಿಯ ಕೈಕೊಳ್ಳುವ ಬಗ್ಗೆ ಪುನಃ ಟೆಂಡರ್‌ನ್ನು ಅವ್ಹಾನಿಸಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ನಿರ್ಣಯಿಸಲಾಯಿತು.

ಸೂಚಕರು: ಶ್ರೀ ರಾಜಶೇಖರಪ್ಪ ಮಹಾಲಿಂಗಪ್ಪ ಕರೆಣ್ಣವರ
ಅನುಮೋದಕರು: ಶ್ರೀ ಮಲ್ಲನಗೌಡ ಶಂಕರಗೌಡ ಪಾಟೀಲ

ವಿಷಯ ನಂ–4) ನಿಯಮ–71 ರಡಿ ಕೃಉಮಾಸ ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಹಳೇಯ ಕಛೇರಿ ಕಟ್ಟಡವನ್ನು ದುರಸ್ತಿಗೊಳಿಸಿ ಸುಣ್ಣ ಬಣ್ಣ ಹಚ್ಚುವ ಕಾಮಗಾರಿ ಭಾಗ–1 ಹಾಗೂ ಭಾಗ–2 ರ ಕಾಮಗಾರಿಗೆ ಬಂದ ಟೆಂಡರ್‌ಗಳನ್ನು ಒಪ್ಪಿ ದೃಡೀಕರಿಸುವುದು.

ಠರಾವ ನಂ–4) ದಿನಾಂಕ:16–06–2020 ರ ಜರುಗಿದ ಸಮಿತಿ ಸಭೆಯ ಠರಾವ ಸಂಖ್ಯೆ–4 ರಲ್ಲಿ ತೀರ್ಮಾನಿಸಿದಂತೆ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗದಗ ಇವರು ತಯಾರಿಸಿಕೊಟ್ಟ ಅಂದಾಜು ಪತ್ರಿಕೆಯನ್ವಯ ನಿಯಮ 71 ರಡಿಯಲ್ಲಿ ಈ ಕೆಳಕಂಡ ಒಟ್ಟು 02 ಕಾಮಗಾರಿಯನ್ನು ಈ ಸಮಿತಿಯ ಟೆಂಡರ ಪ್ರಕಟಣೆ ಸಂಖ್ಯೆ/ಕೃಉಮಾಸ(ಲ)/367/2020–21, ದಿನಾಂಕ: 23–07–2020 ರ ಮೂಲಕ ಟೆಂಡರನ್ನು ಆಹ್ವಾನಿಸಲಾಗಿತ್ತು. ಸದರಿ ಟೆಂಡರ ಪ್ರಕಟಣೆಯನ್ವಯ ಟೆಂಡರನಲ್ಲಿ ಈ ಕೆಳಕಂಡ ಗುತ್ತಿಗೆದಾರರು ಭಾಗವಹಿಸಿದ್ದು, ವಿವರ ಈ ಕೆಳಗಿನಂತಿರುತ್ತದೆ.

**ಕಾಮಗಾರಿ ಹೆಸರು: 1) ಕೃಉಮಾಸ ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಹಳೇಯ ಕಛೇರಿ ಕಟ್ಟಡವನ್ನು ದುರಸ್ತಿಗೊಳಿಸಿ ಸುಣ್ಣ ಬಣ್ಣ ಹಚ್ಚುವ ಕಾಮಗಾರಿ ಭಾಗ–1(ನಿಯಮ–71)**

**ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ವಿವರ**

| ಕ್ರ. ಸಂ | ಕಾಮಗಾರಿಯ ವಿವರ | ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ಹೆಸರು | ಇಎಂಡಿ ರೂ. | ಗುತ್ತಗೆದಾರರು ನಮೂದಿಸಿದ ದರ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| 1 | ಕೃಉಮಾಸ ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಹಳೇಯ ಕಛೇರಿ ಕಟ್ಟಡವನ್ನು ದುರಸ್ತಿಗೊಳಿಸಿ ಸುಣ್ಣ ಬಣ್ಣ ಹಚ್ಚುವ ಕಾಮಗಾರಿ ಭಾಗ–1 (ನಿಯಮ–71 ರಡಿ) | ಶ್ರೀ ಫಕ್ಕೀರೇಶ ಎಸ್. ರಗಟಿ ಸಾ: ಹುಲ್ಲೂರ | 2500 | 89,043–00 | 1 ನೇ ಕಡಿಮೆ ದರ |
| | | ಶ್ರೀ ಕಲ್ಲಪ್ಪ ಎಂ. ಹಡಪದ ಸಾ: ಲಕ್ಷ್ಮೇಶ್ವರ | 2500 | 89810–08 | 2 ನೇ ಕಡಿಮೆ ದರ |

ಮೇಲೆ ಹೇಳಿದ ಗುತ್ತಿಗೆದಾರರಲ್ಲಿ ಶ್ರೀ ಫಕ್ಕೀರೇಶ ಎಸ್. ರಗಟಿ ಗುತ್ತಿಗೆದಾರರು, ಸಾ: ಹುಲ್ಲೂರ, ಇವರು 1 ನೇ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರಾಗಿದ್ದು ಸದರಿಯವರ ದಾಖಲಾತಿಗಳ್ನು ಪರಿಶೀಲಿಸಿ, ಕಾಮಗಾರಿಯನ್ನು ನೀಡುವ ಕುರಿತು ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಎಂಡಿಪಿ ಗದಗ ಇವರು ಮಾಡಿರುವ ಸಿಫಾರಸ್ಸಿನ್ವಯ, ಕೃಉಮಾಸ ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಹಳೇಯ ಕಛೇರಿ ಕಟ್ಟಡವನ್ನು ದುರಸ್ತಿಗೊಳಿಸಿ ಸುಣ್ಣ ಬಣ್ಣ ಹಚ್ಚುವ ಕಾಮಗಾರಿ ಭಾಗ–1 (ನಿಯಮ–71 ರಡಿಯಲ್ಲಿ) ಕಾಮಗಾರಿಯನ್ನು ಕಡಿಮೆ ದರ ನಮೂದಿಸಿರುವ ಶ್ರೀ ಫಕ್ಕೀರೇಶ ಎಸ್. ರಗಟಿ ಗುತ್ತಿಗೆದಾರರು, ಸಾ: ಹುಲ್ಲೂರ, ಇವರು ಸೂಚಿಸಿದ ಮೊತ್ತ ರೂ. 89,043–00 ಗಳಿಗೆ ಒಪ್ಪಿ, ನಿರ್ಣಯಿಸಲಾಯಿತು. ಸದರಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲು ತೀರ್ಮಾನಿಸಲಾಯಿತು.

**ಕಾಮಗಾರಿ ಹೆಸರು: 2) ಕೃಉಮಾಸ ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಹಳೇಯ ಕಛೇರಿ ಕಟ್ಟಡವನ್ನು ದುರಸ್ತಿಗೊಳಿಸಿ ಸುಣ್ಣಬಣ್ಣ ಹಚ್ಚುವ ಕಾಮಗಾರಿ ಭಾಗ–2(ನಿಯಮ–71)**

**ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ವಿವರ.**

| ಕ್ರ. ಸಂ | ಕಾಮಗಾರಿಯ ವಿವರ | ಟೆಂಡರನಲ್ಲಿ ಭಾಗವಹಿಸಿದ ಗುತ್ತಿಗೆದಾರರ ಹೆಸರು | ಇಎಂಡಿ ರೂ. | ಗುತ್ತಗೆದಾರರು ನಮೂದಿಸಿದ ದರ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| 1 | ಕೃಉಮಾಸ ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಹಳೇಯ ಕಛೇರಿ ಕಟ್ಟಡವನ್ನು ದುರಸ್ತಿಗೊಳಿಸಿ ಸುಣ್ಣ ಬಣ್ಣ ಹಚ್ಚುವ ಕಾಮಗಾರಿ ಭಾಗ–2 (ನಿಯಮ–71 ರಡಿ) | ಶ್ರೀ ಫಕ್ಕೀರೇಶ ಎಸ್. ರಗಟಿ ಸಾ: ಹುಲ್ಲೂರ | 2500 | 89,169–00 | 1 ನೇ ಕಡಿಮೆ ದರ |
| | | ಶ್ರೀ ಕಲ್ಲಪ್ಪ ಎಂ. ಹಡಪದ ಸಾ: ಲಕ್ಷ್ಮೇಶ್ವರ | 2500 | 89,555–48 | 2 ನೇ ಕಡಿಮೆ ದರ |

ಮೇಲೆ ಹೇಳಿದ ಗುತ್ತಿಗೆದಾರರಲ್ಲಿ ಶ್ರೀ ಫಕ್ಕೀರೇಶ ಎಸ್. ರಗಟಿ ಗುತ್ತಿಗೆದಾರರು, ಸಾ: ಹುಲ್ಲೂರ, ಇವರು 1ನೇ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರಾಗಿದ್ದು ಸದರಿಯವರ ದಾಖಲಾತಿಗಳನ್ನು ಪರಿಶೀಲಿಸಿ, ಕಾಮಗಾರಿಯನ್ನು ನೀಡುವ ಕುರಿತು ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಎಂಡಿಪಿ ಗದಗ ಇವರು ಮಾಡಿರುವ ಸಿಪ್ಪಾರಸ್ಸಿನನ್ವಯ, ಕೃಉಮಾಸ ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಹಳೇಯ ಕಛೇರಿ ಕಟ್ಟಡವನ್ನು ದುರಸ್ತಿಗೊಳಿಸಿ ಸುಣ್ಣ ಬಣ್ಣ ಹಚ್ಚುವ ಕಾಮಗಾರಿ ಭಾಗ-2 (ನಿಯಮ-71 ರಡಿಯಲ್ಲಿ) ಕಾಮಗಾರಿಯನ್ನು ಕಡಿಮೆ ದರ ನಮೂದಿಸಿರುವ ಶ್ರೀ ಫಕ್ಕೀರೇಶ ಎಸ್. ರಗಟಿ ಗುತ್ತಿಗೆದಾರರು, ಸಾ: ಹುಲ್ಲೂರ, ಇವರು ಸೂಚಿಸಿದ ಮೊತ್ತ ರೂ. 89,169-00 ಗಳಿಗೆ ಒಪ್ಪಿ, ನಿರ್ಣಯಿಸಲಾಯಿತು. ಸದರಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲು ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ಸೋಮಪ್ಪ ಮೇಘಪ್ಪ ಲಮಾಣಿ
ಅನುಮೋದಕರು: ಶ್ರೀ ಶ್ರೀಮತಿ ಸವಿತಾ ರಾಜಶೇಖರ ಭಾವಿಕಟ್ಟಿ

ವಿಷಯ ನಂ-5) ಮಾರುಕಟ್ಟೆ ಪ್ರಾಂಗಣದಲ್ಲಿ ಪೇಟೆ ಕಾರ್ಯಕರ್ತರಿಗೆ ನೀಡಿರುವ ನಳದ ನೀರಿಗೆ ಮಾಸಿಕ ಶುಲ್ಕ ನಿಗಧಿಪಡಿಸುವ ಬಗ್ಗೆ.

ಠರಾವ ನಂ-5) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ದಿ) ಅಧಿನಿಯಮ 1966 ರ ಕಲಂ 65 (2) ರ ಮೇರೆಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಆಕರಿಸುತ್ತಿರುವ ಮಾರುಕಟ್ಟೆ ಶುಲ್ಕ/ಬಳಕೆದಾರರ ಶುಲ್ಕವನ್ನು ಮಾರ್ಪಡಿಸಿ ಎಲ್ಲಾ ಅಧಿಸೂಚಿತ ಕೃಷಿ ಉತ್ಪನ್ನಗಳಿಗೆ ಶೇ.0.35 ಕ್ಕೆ ನಿಗಧಿಪಡಿಸಿ ಸರ್ಕಾರವು ಆದೇಶಿಸಿದ್ದು, ಇದರಿಂದ ಮುಂದಿನ ದಿನಮಾನಗಳಲ್ಲಿ ಸಮಿತಿಗೆ ವಸೂಲಾತಿಯಾಗುವ ಮಾರುಕಟ್ಟೆ ಶುಲ್ಕವು ಕುಂಠಿತಗೊಂಡು, ಆದಾಯವು ಕಡಿಮೆಯಾಗಬಹುದಾಗಿದೆ. ಪ್ರಯುಕ್ತ ಸಮಿತಿಯ ಖರ್ಚು-ವೆಚ್ಚಗಳನ್ನು ನೀಗಿಸಲು ಇನ್ನಿತರ ಆದಾಯವನ್ನು ಹೆಚ್ಚಿಗೆಗೊಳಿಸುವುದು ಸೂಕ್ತವೆಂದು ಸಮಿತಿಯು ಮನಗಂಡು, ಮಾರುಕಟ್ಟೆ ಪ್ರಾಂಗಣದಲ್ಲಿ ನಳದ ಜೋಡಣೆ ಪಡೆದಿರುವ ಎಲ್ಲ ಪೇಟೆಕಾರ್ಯಕರ್ತರಿಂದ ನೀರಿನ ಶುಲ್ಕವಾಗಿ ಮಾಸಿಕ ರೂ.100-00 ರಂತೆ ದಿನಾಂಕ: 01-10-2020 ರಿಂದ ವಸೂಲಾತಿ ಮಾಡಬೇಕೆಂದು ಸೂಚಿಸಿ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸೂಚಕರು: ಶ್ರೀ ಷಣ್ಮುಖಗೌಡ ಪ್ರಭುಗೌಡ ಪಾಟೀಲ
ಅನುಮೋದಕರು: ಶ್ರೀ ಓಂಪ್ರಕಾಶ ಪುಕರಾಜ ಜೈನ

ವಿಷಯ ನಂ-6) 2020-21 ನೇ ಸಾಲಿನಿಂದ ಮುಂದಿನ ಅವಧಿಗೆ ಲೈಸನ್ಸ್ ಕೋರಿ ಬಂದ ಅರ್ಜಿಗಳನ್ನು ಪರಿಶೀಲಿಸಿ, ಮಂಜೂರಾತಿ ಮಾಡುವ ಕುರಿತು.

ಠರಾವ ನಂ-6) ಈ ಕೆಳಕಾಣಿಸಿದ ಅರ್ಜಿದಾರರು ಸಮಿತಿಯಿಂದ ಲೈಸನ್ಸ ಕೋರಿ ಅವಶ್ಯಕ ದಾಖಲಾತಿಗಳೊಂದಿಗೆ ನಿಗಧಿತ ನಮೂನೆಯಲ್ಲಿ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಿದ್ದು ಅವರುಗಳ ವಿವರವನ್ನು ಸಭೆಗೆ ಓದಿ ಹೇಳಲಾಯಿತು.

| **ಕ್ರ.ಸಂ** | **ದಲ್ಲಾಲರ ವಿವರ ಮತ್ತು ವಿಳಾಸ** | **ಕೋರಿದ ಲೈಸನ್ಸ ವಿವರಗಳು** |
|---|---|---|
| 1 | ಶ್ರೀ ಮಂಜುನಾಥ ಟ್ರೇಡಿಂಗ್ ಫರ್ಮ್, ಪ್ರೋ: ವೀರಭದ್ರಪ್ಪ ವೀ ಜವಳಿ, ಸಾ: ಲಕ್ಷ್ಮೇಶ್ವರ | ದಲ್ಲಾಲಿ |

| **ಕ್ರ. ಸಂ** | **ವರ್ತಕರ ಹೆಸರು ಮತ್ತು ವಿವರ** | **ರಫ್ತುದಾರರು** | **ಆಮದುದಾರರು** | **ಸಂಗ್ರಣಗಾರರು** | **ಸಂಸ್ಕರಣಕಾರರು** | **ಕೃಷರ್** | **ಜಿನ್ನರ್** | **ಪ್ರೆಷರ್** |
|---|---|---|---|---|---|---|---|---|
| 1 | ಶ್ರೀ ಪದ್ಮಾವತಿ ಟ್ರೇಡರ್ಸ್, **ಪ್ರೋ:** ಶ್ರೀಮಂದಿರ ಜಿ. ಬರಿಗಾಲಿ, ಸಾ: ಲಕ್ಷ್ಮೇಶ್ವರ | 01 | 01 | 01 | - | - | - | - |
| 2 | ಶ್ರೀ ಮಂಜುನಾಥ ಟ್ರೇಡಿಂಗ್ ಕಂಪನಿ, **ಪ್ರೋ:** ವೀರಭದ್ರಪ್ಪ ವೀ. ಜವಳಿ ಸಾ: ಲಕ್ಷ್ಮೇಶ್ವರ | - | - | 01 | - | - | - | - |
| 3 | ಶ್ರೀ ನಂದಿ ಅಗ್ರೋ ಇಂಡಸ್ಟ್ರೀಜ್, **ಪ್ರೋ:** ಬಸವರಾಜ ವೀ ಜವಳಿ, ಸಾ: ಲಕ್ಷ್ಮೇಶ್ವರ | - | - | 01 | - | - | - | - |

ಸಭೆಯಲ್ಲಿ ಈ ಕುರಿತು ಕೂಲಂಕುಷವಾಗಿ ಪರಿಶೀಲಿಸಿ ಮೇಲ್ಕಾಣಿಸಿದ ದಲ್ಲಾಲರು ಮತ್ತು ಇನ್ನಿತರ ಲೈಸನ್ಸಗಳನ್ನು 10 ವರ್ಷದ ಅವಧಿಗೆ ಲೈಸನ್ಸ ಮಂಜೂರು/ನವೀಕರಣ ಮಾಡಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸೂಚಕರು: ಶ್ರೀ ಗುಡದಯ್ಯ ರಾಮಪ್ಪ ಕೊಪ್ಪದ
ಅನುಮೋದಕರು: ಶ್ರೀಮತಿ ಪಕ್ಕವ್ವ ಯಲ್ಲಪ್ಪ ಜೋಗಿ

ವಿಷಯ ನಂ-7) ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು.

ವಿಷಯ ನಂ-7(1) 2017-18 ಹಾಗೂ 2018-19 ನೇ ಸಾಲಿಗಾಗಿ ಸಾಮಾನ್ಯ ನಿಧಿ ಹಾಗೂ ಖಾಯಂ ಪುರವಣಿ ಪತ್ರದಲ್ಲಿ ಬಜೆಟ್‌ಗಿಂತ ಹೆಚ್ಚಿಗೆ ಖರ್ಚು ಮಾಡಿರುವುದಕ್ಕೆ ಪುರವಣಿ ಬಜೆಟ್ ಮಂಜೂರಾತಿ ಪಡೆಯುವುದು.

ಠರಾವ ನಂ-7(1)

2017-18 ಹಾಗೂ 2018-19 ನೇ ಸಾಲಿಗಾಗಿ ಸಾಮಾನ್ಯ ನಿಧಿ ಹಾಗೂ ಖಾಯಂ ನಿಧಿ ಪುರವಣಿ ಪತ್ರದಲ್ಲಿ ಬಜೆಟ್‌ಗಿಂತ ಹೆಚ್ಚಿಗೆ ಖರ್ಚು ಮಾಡಿರುವದಕ್ಕೆ ಪುರವಣಿ ಬಜೆಟ್ ಮಂಜೂರಾತಿ ಪಡೆಯಲು ದಿನಾಂಕ: 11-08-2020 ರ ಸಮಿತಿಯ ಸಾಮಾನ್ಯ ಸಭೆ ಠರಾವು ಸಂಖ್ಯೆ 6(3) ಹಾಗೂ 6(4) ರಲ್ಲಿ ನಿರ್ಣಯಿಸಿ, ಮಂಜೂರಾತಿಗಾಗಿ ಮಾನ್ಯ ಸಹಾಯಕ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಗದಗ, ಇವರಿಗೆ ದಿನಾಂಕ: 07-09-2020 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಮಾನ್ಯ ಸಹಾಯಕ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಗದಗ, ಇವರು ತಮ್ಮ ಪತ್ರ ಸಂಖ್ಯೆ/ಸನಿಗ/ಕೃಮಾಇ/ಬಜೆಟ್/227/2020-21 ದಿನಾಂಕ: 10-9-2020 ರಲ್ಲಿ ಕೆಲವು ಶೀರ್ಷಿಕೆಗಳಲ್ಲಿ ಮಾಡಿರುವ ಹೊಂದಾಣಿಕೆ ಮೊತ್ತವು ನಿಯಮಗಳಿಗೆ ವ್ಯತಿರಿಕ್ತವಾಗಿದ್ದು, ನಿಯಮಾನುಸಾರ ಹೊಂದಾಣಿಕೆ ಮಾಡುವ ಶೀರ್ಷಿಕೆಗಳಿಗೆ ಮಾತ್ರ ಹೊಂದಾಣಿಕೆ ಮಾಡಿ ಸದರಿ 2017-18 ಹಾಗೂ 2018-19 ನೇ ಸಾಲುಗಳ ಸಾಮಾನ್ಯ ನಿಧಿ ಹಾಗೂ ಖಾಯಂ ನಿಧಿ ಪುರವಣಿ ಮಂಜೂರಾತಿಗಾಗಿ ಒಂದೇ ಪ್ರಸ್ತಾವನೆ ತಯಾರಿಸಿ, ಮರು ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಅದರನ್ವಯ ಈ ಕೆಳಗಿನಂತೆ ಪರಿಷ್ಕೃತ ಮಂಜೂರಾದ ಆಯ-ವ್ಯಯದಲ್ಲಿ ಹೆಚ್ಚಿಗೆ ಖರ್ಚು ಮಾಡಿರುವ ಹಾಗೂ ಉಳಿತಾಯವಾಗಿರುವ ಲೆಕ್ಕ ಶೀರ್ಷಿಕೆಗಳು, ಮರು ಹೊಂದಾಣಿಕೆ ಮಾಡಿಕೊಳ್ಳಬಹುದಾದ ಲೆಕ್ಕ ಶೀರ್ಷಿಕೆಗಳು ಪುರವಣಿ ಬಜೆಟ್ ಪಡೆಯಬೇಕಾದ ಲೆಕ್ಕ ಶೀರ್ಷಿಕೆಗಳು ಹಾಗೂ ಆಯ-ವ್ಯಯ ಮಂಜೂರಾತಿ ಪಡೆಯದೇ ಖರ್ಚು ಮಾಡಿರುವ ಲೆಕ್ಕ ಶೀರ್ಷಿಕೆಗಳ (ಪರಿಷ್ಕೃತ ತಃಖ್ತೆಗಳು) ವಿವರಗಳನ್ನು ಕಾರ್ಯದರ್ಶಿಯವರು ಸಭೆಯಲ್ಲಿ ವಿವರಿಸಿದರು.

**ಭಾಗ-1 (ಅ) ಸನ್ 2017-18 ನೇ ಸಾಲಿನಲ್ಲಿ ಮಂಜೂರಾದ ಮತ್ತು ಖರ್ಚಾದ ಆಯವ್ಯಯದ ವಿವರ.**

| ಅ. ನಂ | ವೆಚ್ಚ | ಮಂಜೂರಾದ ಬಜೆಟ್ | ಖರ್ಚಾದ ಮೊತ್ತ | ಉಳಿತಾಯ | ಹೆಚ್ಚಿಗೆ ಖರ್ಚು |
|---|---|---|---|---|---|
| 1 | ಸದಸ್ಯರ ಪ್ರವಾಸ ಭತ್ಯ & ಸಿಟಿಂಗ್ ಫೀ | 60000 | 101890 | - | 41890 |
| 2 | ಮುದ್ರಣ & ಲೇಖನ ಸಾಮಗ್ರಿ | 60000 | 49037 | 10963 | - |
| 3 | ಸಾದಿಲ್ವಾರ | 30000 | 22620 | 7380 | - |
| 4 | ಪ್ರಚಾರ, ಪ್ರಕಟಣೆ ಮತ್ತು ಜಾಹೀರಾತು | 40000 | 52399 | - | 12399 |
| 5 | ಅಂಚೆ ಮತ್ತು ತಂತಿ | 15000 | 6890 | 8110 | - |
| 6 | ಗಣ್ಯ ವ್ಯಕ್ತಿಗಳ ಸಂದರ್ಶನ | 5000 | - | 5000 | - |
| 7 | ಬಾಡಿಗೆ ದರ ಕರ ಇತ್ಯಾದಿ | 50000 | - | 50000 | - |
| 8 | ದಿನ ಪತ್ರಿಕೆಗಳು | 10000 | 5313 | 4687 | - |
| 9 | ರಾಷ್ಟ್ರೀಯ ಹಬ್ಬಗಳು | 5000 | 5350 | - | 350 |
| 10 | ಸಭೆಯ ಖರ್ಚು | 40000 | 27705 | 12295 | - |
| 11 | ವಿದ್ಯುತ್ ಬಿಲ್ / ದುರಸ್ತಿ ವೆಚ್ಚ | 100000 | 254636 | - | 154636 |
| 12 | ಮಾರುಕಟ್ಟೆ ಪ್ರಾಂಗಣ ಸ್ವಚ್ಛತೆ ಮತ್ತು ಸಂರಕ್ಷಣೆ ಮತ್ತು ಭದ್ರತೆ | 558826 | 2481854 | - | 1926028 |
| 13 | ಮಾರುಕಟ್ಟೆ ಪ್ರಾಂಗಣ ಉಸ್ತುವಾರಿ | 60000 | 72687 | - | 12687 |
| 14 | ಕಚೇರಿ ನಿರ್ವಹಣೆ (ಸಮಿತಿಯ ಗಣಕ ಯಂತ್ರ ಜಡ ವಸ್ತು ದುರಸ್ತಿ) | 40000 | 26189 | 13811 | - |
| | **ಒಟ್ಟು** | 10,73,826 | 31,06,570 | **1,12,246** | 21,47,990 |

**ಭಾಗ–1(ಆ) ಸನ್ 2018–19 ನೇ ಸಾಲಿನಲ್ಲಿ ಮಂಜೂರಾದ ಮತ್ತು ಖರ್ಚಾದ ಆಯವ್ಯಯದ ವಿವರ.**

| ಅ. ನಂ | ವೆಚ್ಚ | ಮಂಜೂರಾದ ಬಜೆಟ್ | ಖರ್ಚಾದ ಮೊತ್ತ | ಉಳಿತಾಯ | ಹೆಚ್ಚಿಗೆ ಖರ್ಚು |
|---|---|---|---|---|---|
| 1 | ಸದಸ್ಯರ ಪ್ರವಾಸ ಭತ್ಯ & ಸಿಟಿಂಗ್ ಫೀ | 60000 | 65425 | – | 5425 |
| 2 | ಮುದ್ರಣ & ಲೇಖನ ಸಾಮಗ್ರಿ | 60000 | 84225 | – | 24225 |
| 3 | ಸಾದಿಲ್ವಾರ | 40000 | 35307 | 4,693 | – |
| 4 | ಪ್ರಚಾರ, ಪ್ರಕಟಣೆ ಮತ್ತು ಜಾಹೀರಾತು | 40000 | 165136 | – | 125136 |
| 5 | ಅಂಚೆ ಮತ್ತು ತಂತಿ | 15000 | 5050 | 9,950 | – |
| 6 | ಗಣ್ಯ ವ್ಯಕ್ತಿಗಳ ಸಂದರ್ಶನ | 5000 | – | 5,000 | – |
| 7 | ಬಾಡಿಗೆ ದರ ಕರ ಇತ್ಯಾದಿ | 20000 | – | 20,000 | – |
| 8 | ದಿನ ಪತ್ರಿಕೆಗಳು | 10000 | 4965 | 5,035 | – |
| 9 | ರಾಷ್ಟ್ರೀಯ ಹಬ್ಬಗಳು | 5000 | 7440 | – | 2440 |
| 10 | ಸಭೆಯ ಖರ್ಚು | 40000 | 25200 | 14,800 | – |
| 11 | ವಿದ್ಯುತ್ ಬಿಲ್ / ದುರಸ್ತಿ ವೆಚ್ಚ | 100000 | 314058 | – | 214058 |
| 12 | ಮಾರುಕಟ್ಟೆ ಪ್ರಾಂಗಣ ಸ್ವಚ್ಛತೆ ಮತ್ತು ಸಂರಕ್ಷಣೆ ಮತ್ತು ಭದ್ರತೆ | 642500 | 2401464 | – | 1758964 |
| 13 | ಮಾರುಕಟ್ಟೆ ಪ್ರಾಂಗಣ ಉಸ್ತುವಾರಿ ಶುದ್ಧ ನೀರಿನ ಘಟಕ ಮೇಮರಿನ್ ಖರೀದಿ | 60000<br>98120<br>158120 | 199803 | – | 41683 |
| 14 | ಕಚೇರಿ ನಿರ್ವಹಣೆ (ಸಮಿತಿಯ ಗಣಕ ಯಂತ್ರ ಜಡ ವಸ್ತು ದುರಸ್ತಿ) | 40000 | 14650 | 25350 | – |
| | **ಒಟ್ಟು ರೂ.** | 1235620 | 3322723 | **84,828** | **21,71,931** |

**ಭಾಗ–2(ಅ) ಸನ್ 2017–18 ನೇ ಸಾಲಿನಲ್ಲಿ ಉಳಿತಾಯವಾದ ಆಯವ್ಯಯದಲ್ಲಿ ಮರು ಹೊಂದಾಣಿಕೆ ಮಾಡಿಕೊಂಡ ಹೆಚ್ಚಿಗೆ ಖರ್ಚಾದ ಶೀರ್ಷಿಕೆಗಳು.**

| ಅ. ನಂ | ವೆಚ್ಚ | ಮಂಜೂರಾದ ಬಜೆಟ್ | ಖರ್ಚಾದ ಮೊತ್ತ | ಉಳಿತಾಯ | ಹೆಚ್ಚಿಗೆ ಖರ್ಚು |
|---|---|---|---|---|---|
| 1 | ಸದಸ್ಯರ ಪ್ರವಾಸ ಭತ್ಯ & ಸಿಟಿಂಗ್ ಫೀ | 60000 | 101890 | | 41890 |
| 2 | ಪ್ರಚಾರ ಪ್ರಕಟಣೆ & ಜಾಹಿರಾತು | 40000 | 52399 | | 12399 |
| 3 | ರಾಷ್ಟ್ರೀಯ ಹಬ್ಬಗಳು | 5000 | 5350 | | 350 |
| 4 | ಮಾರುಕಟ್ಟೆ ಪ್ರಾಂಗಣ ಉಸ್ತುವಾರಿ | 60000 | 72687 | | 12687 |
| | **ಒಟ್ಟು ರೂ.** | 1,65,000 | 2,32,326 | **1,12,246** | 67,326 |

**ಭಾಗ–2(ಆ) ಸನ್ 2018–19 ನೇ ಸಾಲಿನಲ್ಲಿ ಉಳಿತಾಯವಾದ ಆಯವ್ಯಯದಲ್ಲಿ ಮರು ಹೊಂದಾಣಿಕೆ ಮಾಡಿಕೊಂಡ ಹೆಚ್ಚಿಗೆ ಖರ್ಚಾದ ಶೀರ್ಷಿಕೆಗಳು.**

| ಅ. ನಂ | ವೆಚ್ಚ | ಮಂಜೂರಾದ ಬಜೆಟ್ | ಖರ್ಚಾದ ಮೊತ್ತ | ಉಳಿತಾಯ | ಹೆಚ್ಚಿಗೆ ಖರ್ಚು |
|---|---|---|---|---|---|
| 1 | ಸದಸ್ಯರ ಪ್ರವಾಸ ಭತ್ಯ & ಸಿಟಿಂಗ್ ಫೀ | 60000 | 65425 | | 5425 |
| 2 | ಮುದ್ರಣ & ಲೇಖನ ಸಾಮಗ್ರಿ | 60000 | 84225 | | 24225 |
| 3 | ರಾಷ್ಟ್ರೀಯ ಹಬ್ಬಗಳು | 5000 | 7440 | | 2440 |
| | **ಒಟ್ಟು ರೂ.** | 1,25,000 | 1,57,090 | 84,828 | 32,090 |

**ಭಾಗ–3 (ಅ) 2017–18 ನೇ ಸಾಲಿಗೆ ಪುರವಣಿ ಆಯವ್ಯಯ ಮಂಜೂರಾತಿ ಪಡೆಯಬೇಕಾದ ಶೀರ್ಷಿಕೆಗಳು.**

| ಅ. ನಂ | ವೆಚ್ಚ | ಮಂಜೂರಾದ ಬಜೆಟ್ | ಖರ್ಚಾದ ಮೊತ್ತ | ಉಳಿತಾಯ | ಹೆಚ್ಚಿಗೆ ಖರ್ಚು |
|---|---|---|---|---|---|
| 1 | ಮಾರುಕಟ್ಟೆ ಪ್ರಾಂಗಣ ಸ್ವಚ್ಛತೆ ಮತ್ತು ಭದ್ರತೆ. | 558826 | 2481854 | – | 1926028 |
| 2 | ವಿದ್ಯುತ್ ಬಿಲ್ ದುರಸ್ತಿ | 100000 | 254636 | – | 154636 |
| | **ಒಟ್ಟು ರೂ.** | 6,58,826 | 27,36,490 | – | 20,80,664 |

**ಭಾಗ-3 (ಆ) 2018-19 ನೇ ಸಾಲಿಗೆ ಪುರವಣಿ ಆಯವ್ಯಯ ಮಂಜೂರಾತಿ ಪಡೆಯಬೇಕಾದ ಶೀರ್ಷಿಕೆಗಳು.**

| ಅ. ನಂ | ವೆಚ್ಚ | ಮಂಜೂರಾದ ಬಜೆಟ್ | ಖರ್ಚಾದ ಮೊತ್ತ | ಉಳಿತಾಯ ) | ಹೆಚ್ಚಿಗೆ ಖರ್ಚು |
|---|---|---|---|---|---|
| 1 | ಮಾರುಕಟ್ಟೆ ಪ್ರಾಂಗಣ ಸ್ವಚ್ಚತೆ ಮತ್ತು ಭದ್ರತೆ. | 642500 | 2401464 | – | 1758964 |
| 2 | ವಿದ್ಯುತ್ ಬಿಲ್ / ದುರಸ್ತಿ | 100000 | 314058 | – | 214058 |
| 3 | ಮಾರುಕಟ್ಟೆ ಪ್ರಾಂಗಣ ಉಸ್ತುವಾರಿ (60,000) ಶುದ್ಧ ನೀರಿನ ಘಟಕಕ್ಕೆ ಮೇಮರಿನ್ (98,120) ಪ್ರತ್ಯೇಕ ಬಜೆಟ್ ಮಂಜೂರಾತಿ ಪಡೆಯಲಾಗಿದೆ. | 158120 | 199803 | – | 41683 |
| 4 | ಜನಶ್ರಿ ವಿಮಾ ಯೋಜನೆ | 30000 | 46580 | – | 16580 |
| 5 | ಪ್ರಚಾರ ಮತ್ತು ಪ್ರಕಟಣೆ | 40000 | 165136 | – | 125136 |
| 6 | ಕಾನೂನು ಶುಲ್ಕ | 20000 | 24000 | – | 4000 |
| | **ಒಟ್ಟು ರೂ.** | **9,90,620** | **31,51,041** | **–** | **21,60,421** |

ಸಭೆಯಲ್ಲಿ ಈ ಕುರಿತು ಚರ್ಚಿಸಲಾಯಿತು, ಈ ಮೇಲೆ ವಿವರಿಸಿದಂತೆ ಭಾಗ-1(ಅ) 2017-18 ನೇ ಸಾಲಿನಲ್ಲಿರುವ 14 ಶೀರ್ಷಿಕೆಗಳ ಪೈಕಿ ಅ.ಸಂಖ್ಯೆ-01, 04, 09, 11, 12, ಹಾಗೂ 13 ರಲ್ಲಿ ಮಂಜೂರಾತಿ ನೀಡಿದ ಆಯ-ವ್ಯಯಕ್ಕಿಂತ ಹೆಚ್ಚಿಗೆ ಖರ್ಚು ಮಾಡಲಾಗಿರುತ್ತದೆ. ಹೀಗೆ ಹೆಚ್ಚಾಗಿ ಖರ್ಚು ಮಾಡಿರುವ ಮೊತ್ತವನ್ನು ಸದರಿ ವರ್ಷದಲ್ಲಿ ಉಳಿತಾಯವಾಗಿರುವ ಲೆಕ್ಕ ಶೀರ್ಷಿಕೆಗಳ ಮೊತ್ತದೊಂದಿಗೆ ಸಮಿತಿಯ ಹಂತದಲ್ಲಿಯೇ ಮರುಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿರುವುದರಿಂದ ಭಾಗ-2 (ಅ) ರಲ್ಲಿ ವಿವರಿಸಿದಂತೆ 1) ಸಾದಿಲ್ವಾರ 2) ಅಂಚೆ ಮತ್ತು ತಂತಿ ಮತ್ತು 3) ಗಣ್ಯ ವ್ಯಕ್ತಿಗಳ ಸಂದರ್ಶನ 4) ಬಾಡಿಗೆ ದರ ಕರ ಇತ್ಯಾದಿ 5) ದಿನ ಪತ್ರಿಕೆ 6) ಸಭೆಯ ವೆಚ್ಚ ಹಾಗೂ 7) ಕಛೇರಿ ನಿರ್ವಹಣೆ ಶೀರ್ಷಿಕೆಗಳಡಿ ಹೆಚ್ಚಿಗೆ ಖರ್ಚು ಮಾಡಲಾದ **ಮೊತ್ತ ರೂ. 67,326-00** ಗಳನ್ನು **ಉಳಿತಾಯವಾಗುವ ಮೊತ್ತ ರೂ. 1,12,246-00** ರಲ್ಲಿ ಮರು ಹೊಂದಾಣಿಕೆ ಮಾಡಿರುವುದನ್ನು ಒಪ್ಪಲಾಯಿತು.

ಮುಂದುವರೆದು ಭಾಗ-1 (ಆ) 2018-19 ನೇ ಸಾಲಿನಲ್ಲಿರುವ 14 ಶೀರ್ಷಿಕೆಗಳ ಪೈಕಿ ಅ. ಸಂಖ್ಯೆ- 01, 02, 04, 09, 11, 12 ಹಾಗೂ 13, ರಲ್ಲಿ ಮಂಜೂರಾತಿ ನೀಡಿದ ಆಯ-ವ್ಯಯಕ್ಕಿಂತ ಹೆಚ್ಚಿಗೆ ಖರ್ಚು ಮಾಡಲಾಗಿರುತ್ತದೆ. ಹೀಗೆ ಹೆಚ್ಚಾಗಿ ಖರ್ಚು ಮಾಡಿರುವ ಮೊತ್ತವನ್ನು ಸದರಿ ವರ್ಷದಲ್ಲಿ ಉಳಿತಾಯವಾಗಿರುವ ಲೆಕ್ಕ ಶೀರ್ಷಿಕೆಗಳ ಮೊತ್ತದೊಂದಿಗೆ ಸಮಿತಿಯ ಹಂತದಲ್ಲಿಯೇ ಮರುಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿರುವುದರಿಂದ ಭಾಗ-2 (ಆ) 2018-19 ನೇ ಸಾಲಿನಲ್ಲಿ ವಿವರಿಸಿದಂತೆ 1) ಸಾದಿಲ್ವಾರ, 2) ಅಂಚೆ ಮತ್ತು ತಂತಿ, 3) ಗಣ್ಯ ವ್ಯಕ್ತಿಗಳ ಸಂದರ್ಶನ 4) ಬಾಡಿಗೆ ದರ ಕರ ಇತ್ಯಾದಿ, 5) ದಿನ ಪತ್ರಿಕೆಗಳು 6) ಸಭೆಯ ವೆಚ್ಚ 7) ಕಛೇರಿ ನಿರ್ವಹಣೆ ಶೀರ್ಷಿಕೆಗಳಡಿ, ಹೆಚ್ಚಿಗೆ ಖರ್ಚು ಮಾಡಲಾದ **ಮೊತ್ತ ರೂ. 32,090-00** ಗಳನ್ನು **ಉಳಿತಾಯವಾಗುವ ಮೊತ್ತ ರೂ. 84,828-00** ರಲ್ಲಿ ಮರು ಹೊಂದಾಣಿಕೆ ಾಡಿರುವುದನ್ನು ಒಪ್ಪಲಾಯಿತು

ಮುಂದುವರೆದು ಭಾಗ-3(ಅ) (2017-18 ನೇ ಸಾಲಿಗಾಗಿ) ರಲ್ಲಿ ವಿವರಿಸಿದಂತೆ ಮಾರುಕಟ್ಟೆ ಪ್ರಾಂಗಣ ಸ್ವಚ್ಚತೆ ಮತ್ತು ಭದ್ರತೆ ಲೆಕ್ಕ ಶೀರ್ಷಿಕೆಗೆ **ಮೊತ್ತ ರೂ. 19,26,028-00** ಗಳಿಗೆ ಹಾಗೂ ವಿದ್ಯುತ್ ಬಿಲ್/ದುರಸ್ತಿ ಶಿರ್ಷಿಕೆಗೆ ರೂ. 1,54,636-00 ಹೀಗೆ ಒಟ್ಟು ರೂ. 20,80,664-00 ಭಾಗ-3(ಆ) (2018-19 ಸಾಲಿಗಾಗಿ) ರಲ್ಲಿ ವಿವರಿಸಿದಂತೆ 1) ಮಾರುಕಟ್ಟೆ ಪ್ರಾಂಗಣ ಸ್ವಚ್ಚತೆ ಮತ್ತು ಭದ್ರತೆ, 2) ವಿದ್ಯುತ್ ಬಿಲ್ ದುರಸ್ತಿ, 3) ಮಾರುಕಟ್ಟೆ ಪ್ರಾಂಗಣ ಉಸ್ತುವಾರಿ ಹಾಗೂ 4) ಜನಶ್ರೀ ವಿಮಾ ಯೋಜನೆ 5) ಪ್ರಚಾರ ಮತ್ತು ಪ್ರಕಟಣೆ ಮತ್ತು 6) ಕಾನೂನು ಶುಲ್ಕಗಳಿಗೆ ಲೆಕ್ಕ ಶೀರ್ಷಿಕೆಗಳ **ಒಟ್ಟು ಮೊತ್ತ ರೂ. 21,60,421-00** ಗಳಿಗೆ ಪುರವಣಿ ಆಯವ್ಯಯ ಮಂಜೂರಾತಿಯನ್ನು ಮಾನ್ಯ ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಗದಗ ಇವರಿಂದ ಮಂಜೂರಾತಿ ಪಡೆಯಲು ಒಪ್ಪಿ ನಿರ್ಣಯಿಸಲಾಯಿತು.

ಮುಂದುವರೆದು 2017-18 ಹಾಗೂ 2018-19 ನೇ ಸಾಲಿಗಾಗಿ ಪರಿಷ್ಕೃತ ಪುರವಣಿ ಖಾಯಂ ನಿಧಿ ಬಜೆಟ್ ಮಂಜೂರಾತಿ ಪಡೆಯುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಮಾನ್ಯ ವಿಶೇಶ ಲೆಕ್ಕ ಪರಿಶೋಧಕರು ಈ ಸಮಿತಿಯ 2017–18 ಹಾಗೂ 2018–19 ನೇ ಸಾಲಿನ ಲೆಕ್ಕ ಪರಿಶೋಧನಾ ಕಾರ್ಯ ಕೈಕೊಂಡು ತಮ್ಮ ಪತ್ರ ಸಂಖ್ಯೆ/ಕೃಮಾಇ/ವೀಲೆಪ(ಬೆ)/133/ 2020–21 ದಿನಾಂಕ: 13–07–2020 ರಡಿಯಲ್ಲಿ 02 ವರ್ಷದ ಲೆಕ್ಕ ಪರಿಶೋಧನಾ ವರದಿಯನ್ನು ಬಿಡುಗಡೆಗೊಳಿಸಿದ್ದು, ಸದರಿ ಲೆಕ್ಕ ಪರಿಶೋಧನಾ ವರದಿಯ ಭಾಗ–2 ರಲ್ಲಿಯ ಕಂಡಿಕೆ–17 ರಲ್ಲಿ ಸಮಿತಿಯ ಖಾಯಂ ನಿಧಿ ಮುಂಗಡ ಪತ್ರದಲ್ಲಿ ಈ ಕೆಳಗಿನ ಕಾಮಗಾರಿಗಳಿಗೆ ಬಜೆಟ್ ಮಂಜೂರಾತಿ ಪಡೆಯದೇ ಖರ್ಚು ಮಾಡಿರುವುದನ್ನು ಗುರುತಿಸಿ ಈ ಕುರಿತು ಸಕ್ಷಮ ಪ್ರಾಧಿಕಾರಿಗಳಿಂದ 2017–18 ಹಾಗೂ 2018–19 ನೇ ಸಾಲಿಗಾಗಿ ಖಾಯಂ ನಿಧಿ ಮಂಜೂರಾತಿ ಬಜೆಟ್ ಮಂಜೂರಾತಿ ಪಡೆಯಲು ಸೂಚಿಸಿರುವುದನ್ನು ಸಭೆಯಲ್ಲಿ ಕಾರ್ಯದರ್ಶಿಯವರು ವಿವರಿಸಿದರು.

**2017–18 ನೇ ಸಾಲಿಗಾಗಿ ಪುರವಣಿ ಖಾಯಂ ನಿಧಿ ಬಜೆಟ್**

| ಕ್ರ. ಸಂ | ಖರ್ಚು ಮಾಡಿರುವ ಶೀರ್ಷಿಕೆ ವಿವರ | ಖರ್ಚಾಗಿರುವ ಮೊಬಲಗು |
|---|---|---|
| 1 | 2015–16 ನೇ ಸಾಲಿನ ವಾರ್ಷಿಕ ಕ್ರೀಯಾ ಯೋಜನೆ ಯಡಿಯಲ್ಲಿ 08 ಸಂಖ್ಯೆ ಪ್ಯಾಕೇಜ್ ಕಾಮಗಾರಿ ಮಂಜೂರಾದ ಮೊತ್ತ ರೂ. 11,00,000–00 ಖರ್ಚಾದ ಮೊತ್ರ ರೂ 11,46,638–00 (1ನೇ ಭಾಗಶಃ). | 46,638–00 |
| 2 | ಐ.ಟಿ. ಪರಿಕರಗಳ ಖರೀದಿಗಾಗಿ ಮಾನ್ಯ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರ, ಇವರು ರೂ. 1,72,200–00 ಗಳಿಗೆ ಮಂಜೂರಾತಿ ನೀಡಿದ್ದು, ಪರಿಕರಗಳನ್ನು ಖರೀದಿ ಮಾಡಿದ್ದು, ಹೆಚ್ಚಿಗೆ ಖರ್ಚಾದ ಮೊತ್ತ ರೂ. 8,653–00 ಗಳೊಂದಿಗೆ ಒಟ್ಟು ಖರ್ಚಾಗಿರುವ ರೂ. 1,80,853–00 ಗಳಿಗೆ ಖಾಯಂ ನಿಧಿ ಮಂಜೂರಾತಿ. | 1,80,853–00 |
| | **ಒಟ್ಟು ರೂ.** | **2,27,491–00** |

2018–19 ನೇ **ಸಾಲಿಗಾಗಿ ಪುರವಣಿ ಖಾಯಂ ನಿಧಿ ಬಜೆಟ್**

| ಕ್ರ. ಸಂ | ಖರ್ಚು ಮಾಡಿರುವ ಶೀರ್ಷಿಕೆ ವಿವರ | ಖರ್ಚಾಗಿರುವ ಮೊಬಲಗು |
|---|---|---|
| 1 | ನಿಯಮ–71 ರಡಿಯಲ್ಲಿ ಕೃಉಮಾಸ ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ರೈತ ಭವನ ಕಟ್ಟಡಕ್ಕೆ ವಿದ್ಯುತ್ತಿಕರಣ ಮಾಡುವ ಕಾಮಗಾರಿ. | 92,925–00 |
| 2 | ನಿಯಮ–71 ರಡಿ ಉಪ ಮಾರುಕಟ್ಟೆ ಶಿರಹಟ್ಟಿ ಪ್ರಾಂಗಣದಲ್ಲಿ ಜಾಲಿಕಂಠಿ ಮುಳ್ಳಿನ ಗಿಡಗಂಟೆಗಳನ್ನು ಸ್ವಚ್ಚಗೊಳಿಸುವ ಕಾಮಗಾರಿ. | 98,139–00 |
| 3 | 2015–16 ನೇ ಸಾಲಿನ ವಾರ್ಷಿಕ ಕ್ರೀಯಾ ಯೋಜನೆ ಯಡಿಯಲ್ಲಿ 08 ಸಂಖ್ಯೆ ಪ್ಯಾಕೇಜ್ ಕಾಮಗಾರಿ ಮಂಜೂರಾದ ಮೊತ್ತ ರೂ.11,00,000–00 ಖರ್ಚಾದ ಮೊತ್ತ ರೂ 15,89,981–00 (2ನೇ ಅಂತಿಮ). | 4,89,981–00 |
| | **ಒಟ್ಟು ರೂ.** | **6,81,045–00** |

ಸಮಿತಿಯ ಈ ಕುರಿತು ಕೂಲಂಕುಷವಾಗಿ ಪರಿಶೀಲಿಸಿ, ಸನ್ 2017–18 ಹಾಗೂ 2018–19 ನೇ ಸಾಲಿನಲ್ಲಿ ಕೈಕೊಂಡಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಮಾಡಿರುವ ಒಟ್ಟು ವೆಚ್ಚ **ರೂ.2,27,491+ 6,81,045–00 ಹೀಗೆ ಒಟ್ಟು ರೂ. 9,08,536–00** ಗಳಿಗೆ ಪರಿಷ್ಕೃತ ಪುರವಣಿ ಖಾಯಂ ನಿಧಿ ಬಜೆಟ್‌ನ್ನು ಸಕ್ಷಮ ಪ್ರಾಧಿಕಾರಿಗಳಿಂದ ಮಂಜೂರಾತಿ ಪಡೆಯಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸೂಚಕರು: ಶ್ರೀ ಶಿವಾನಂದ ಸಂಗಪ್ಪ ನೆಲವಿಗಿ
ಅನುಮೋದಕರು: ಶ್ರೀ ವೀರುಪಾಕ್ಷಪ್ಪ ಮಹದೇವಪ್ಪ ಮೇಟಿ

ವಿಷಯ ನಂ–7(2) ಸನ್ 2020–21 ನೇ ಸಾಲಿನ ವಾರ್ಷಿಕ ಕ್ರೇಯಾ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಯ ಹೆಸರು ಬದಲಾವಣೆ ಮಾಡುವ ಕುರಿತು.

ಠರಾವ ನಂ–7(2) ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮೂಲಭೂತ ಸೌಕರ್ಯ ಕಲ್ಪಿಸುವ ಪ್ರಯುಕ್ತ ಸನ್ 2020–21 ನೇ ಸಾಲಿನ ವಾರ್ಷಿಕ ಕ್ರೇಯಾ ಯೋಜನೆಯಲ್ಲಿ ಮುಖ್ಯ ಮಾರುಕಟ್ಟೆ ಪ್ರಾಂಗಣದ ಪಶ್ಚಿಮ ಭಾಗದ ಜಾನುವಾರು ಮಾರುಕಟ್ಟೆಗೆ ಹೊಂದಿಕೊಂಡು ಬಾಕಿ ಉಳಿದಿರುವ ರಸ್ತೆಗೆ ಸಿ.ಸಿ. ಮಾಡುವುದು ಹಾಗೂ ಗಟಾರು ನಿರ್ಮಿಸುವ ಕಾಮಗಾರಿಗೆ ರೂ. 100–00 ಲಕ್ಷ ಅಂದಾಜು ಮೊತ್ತಕ್ಕೆ ಮಾನ್ಯ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರು, ಇವರು ತಮ್ಮ ಆದೇಶ ಸಂಖ್ಯೆ/ಕೃಮಾಇ/ಯೋಜನೆ/ವಾಕ್ರೇಯೋ/4154/2016–17 ದಿನಾಂಕ: 12–03–2020 ರಡಿ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತಾರೆ. ಹಾಗೂ ಪ್ರಸ್ತುತ ಸಮಿತಿಯ ಆರ್ಥಿಕ ಸ್ಥಿತಿಯು ಸದೃಢವಾಗಿದ್ದು, ಕಾಮಗಾರಿಯನ್ನು ಕೈಕೊಳ್ಳಬಹುದಾಗಿದೆಂದು ಕಾರ್ಯದರ್ಶಿಯವರು ಸಭೆಗೆ ವಿವರಿಸಿದರು

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ, ಮಾರುಕಟ್ಟೆ ಪ್ರಾಂಗಣದಲ್ಲಿ ಒಂದು ಭಾಗದ ರಸ್ತೆಯನ್ನು ಸಿ.ಸಿ. ರಸ್ತೆ ಮಾಡದೇ, ಬಾಕಿ ಉಳಿದಿರುವ ಎಲ್ಲಾ ರಸ್ತೆಗಳನ್ನು ಡಾಂಬರೀಕರಣ ಹಾಗೂ ಆರ್.ಸಿ.ಸಿ. ಗಟಾರು ಮಾಡಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು, ಸನ್ 2020–21 ನೇ ಸಾಲಿನ ವಾರ್ಷಿಕ ಕ್ರೇಯಾ ಯೊಜನೆಯಲ್ಲಿ ಮಂಜೂರಾದ ಕಾಮಗಾರಿಯ ಹೆಸರು "ಮುಖ್ಯ ಮಾರುಕಟ್ಟೆ ಪ್ರಾಂಗಣದ ಪಶ್ಚಿಮ ಭಾಗದ ಜಾವಾರು ಮಾರುಕಟ್ಟೆಗೆ ಹೊಂದಿಕೊಂಡು ಬಾಕಿ ಉಳಿದಿರುವ ರಸ್ತೆಗೆ ಸಿ.ಸಿ. ಮಾಡುವುದು ಹಾಗೂ ಗಟಾರು ನಿರ್ಮಿಸುವ ಕಾಮಗಾರಿ" ಇರುವುದನ್ನು ಬದಲಾಯಿಸಿ **"ಲಕ್ಷ್ಮೇಶ್ವರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಬಾಕಿ ಉಳಿದಿರುವ ಆಂತರಿಕ ರಸ್ತೆಗಳಿಗೆ ಡಾಂಬರೀಕರಣ ಹಾಗೂ ಆರ್.ಸಿ.ಸಿ. ಗಟಾರು ನಿರ್ಮಾಣ ಕಾಮಗಾರಿ"**ಯೆಂದು ಬದಲಾಯಿಸಿ, ಕಾಮಗಾರಿ ಕೈಕೊಳ್ಳುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಈ ಕುರಿತು ಮಾನ್ಯ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಬೆಂಗಳೂರು, ಇವರಿಂದ ಕಾಮಗಾರಿಯ ಹೆಸರು ಬದಲಾವಣೆಗೆ ಮಂಜೂರಾತಿ ಪಡೆದುಕೊಂಡು ಕಾಮಗಾರಿಯನು ಕೈಕೊಳ್ಳಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸೂಚಕರು: ಶ್ರೀ ಯಲ್ಲಪ್ಪಗೌಡ ಅಮೃತಗೌಡ ಉದ್ದನಗೌಡ್ರ
ಅನುಮೋದಕರು: ಶ್ರೀ ಓಂ ಪ್ರಕಾಶ ಪುಕರಾಜ ಜೈನ

ವಿಷಯ ನಂ–7(3) ಈ ಕಚೇರಿಯ ಅಧ್ಯಕ್ಷರ ಕೊಠಡಿಯಲ್ಲಿ ಜೋಡಿಸಲು ಒಂದು ಹೊಸ ಕಟ್ಟಿಗೆಯ ಟೇಬಲ್ ಖರೀದಿಸಿ ಅಳವಡಿಸುವ ಬಗ್ಗೆ ಬಂದಿರುವ ದರಪಟ್ಟಿಗಳನ್ನು ಪರಿಶೀಲಿಸಿ ಒಪ್ಪುವ ಬಗ್ಗೆ.

ಠರಾವ ನಂ–7(3) ಸಮಿತಿಯ ಅಧ್ಯಕ್ಷರ ಉಪಯೋಗಕ್ಕಾಗಿ, ಅಧ್ಯಕ್ಷರ ಕೊಠಡಿಯಲ್ಲಿ ಜೋಡಿಸಲು ಒಂದು ಹೊಸ ಕಟ್ಟಿಗೆ ಟೇಬಲ್ ಖರೀದಿಸಿ ಅಳವಡಿಸುವ ಬಗ್ಗೆ ಸಮಿತಿಯ ದರಪಟ್ಟಿ ಕರೆಯೋಲೆ ಪತ್ರ ಸಂಖ್ಯೆ/ಕೃಉಮಾಸ(ಲ)/489/2020–21 ದಿನಾಂಕ: 31–08–2020 ರಲ್ಲಿ ಫರ್ನಿಚರ್ ಸಾಮಾಗ್ರಿಗಳನ್ನು ಪೂರೈಸುವರಿಂದ ದರಪಟ್ಟಿಗಳನ್ನು ಅಹ್ವಾನಿಸಲಾಗಿತ್ತು. ಅದರನ್ವಯ ಈ ಕೆಳಗಿನಂತೆ 03 ಜನ ಪೂರೈಕೆದಾರರು ತಮ್ಮ ದರಸೂಚಿ ದರಪಟ್ಟಿಗಳನ್ನು ಸಲ್ಲಿಸಿರುವುದನ್ನು ಸಭೆಯಲ್ಲಿ ವಿವರಿಸಲಾಯಿತು.

| ಕ್ರ ಸಂ | ದರಪಟ್ಟಿ ಸಲ್ಲಿಸಿರುವ ಪೂರೈಕೆದಾರರ ಹೆಸರು ಮತ್ತು ವಿಳಾಸ | ಸೂಚಿಸಿರುವ ದರ |
|---|---|---|
| 1 | ಡಿಲೈಟ್ ಫರ್ನಿಚರ್, ಕುಸುಗಲ್ ರೋಡ್, ಕೇಶ್ವಾಪೂರ, ಸಾ: ಹುಬ್ಬಳ್ಳಿ. | **ರೂ.**24,780–00 (18% ಜಿ.ಎಸ್.ಟಿ ಸೇರಿ) |
| 2 | ಪ್ರೀಮಿಯರ್ ಫರ್ನಿಚರ್ಸ್ & ಏಜೆನ್ಸೀಜ್, ಸ್ಟೇಷನ್ ರೋಡ್ ಸಾ: ಹುಬ್ಬಳ್ಳಿ, | **ರೂ.**26,337–00 (18% ಜಿ.ಎಸ್.ಟಿ ಸೇರಿ) |
| 3 | ವರುಣ ಏಜೆನ್ಸೀಜ್, ದಾಜೀಬಾನ್ ಪೇಟ್ ಸಾ: ಹುಬ್ಬಳ್ಳಿ | **ರೂ.**26,078–00 (18% ಜಿ.ಎಸ್.ಟಿ ಸೇರಿ) |

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಲಾಯಿತು, ಕಛೇರಿ ಕಾರ್ಯಾಲಯದಲ್ಲಿ ಹೊಸದಾಗಿ ನಿರ್ಮಿಸಿರುವ ಅಧ್ಯಕ್ಷರ ಕೊಠಡಿಗೆ ಒಂದು ಹೊಸ ಕಟ್ಟಿಗೆ ಟೇಬಲ್‌ನ್ನು ಖರೀದಿಸಿ ಅಳವಡಿಸುವುದು ಸೂಕ್ತ ಹಾಗೂ ಅವಶ್ಯಕವೆಂದು ಮನಗಂಡು, ಫರ್ನಿಚರ್ ಸಾಮಾಗ್ರಿಗಳನ್ನು

ಪೂರೈಸುವ ಕುರಿತು ಸಮಿತಿಗೆ ಬಂದಿರುವ ದರಪಟ್ಟಿಗಳಲ್ಲಿ ಕಡಿಮೆ ದರ ಸೂಚಿಸಿರುವ **ಡಿಲೈಟ್ ಫರ್ನಿಚರ್, ಕುಸುಗಲ್ ರೋಡ್, ಸಾ: ಹುಬ್ಬಳ್ಳಿ.** ಇವರು ಸೂಚಿಸಿರುವ ದರ ರೂ.**24,780–00 (18% ಜಿ.ಎಸ್.ಟಿ ಸೇರಿ)** ಕಡಿಮೆ ದರವಾಗಿರುವುದನ್ನು ಒಪ್ಪಲಾಯಿತು. ಸದರಿಯವರಿಂದ ಒಂದು ಹೊಸ ಕಟ್ಟಿಗೆ ಟೇಬಲ್‌ನ್ನು ಖರೀದಿಸಲು ಸೂಚಿಸಿ, ಹಾಗೂ ಈ ಕುರಿತು ಸಕ್ಷಮ ಪ್ರಾಧಿಕಾರಿಗಳಿಂದ ಘಟನೋತ್ತರ ಬಜೆಟ್ ಮಂಜೂರಾತಿ ಪಡೆದುಕೊಳ್ಳಬೇಕೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸೂಚಕರು: ಶ್ರೀ ರಾಜಶೇಖರಪ್ಪ ಮಹಾಲಿಂಗಪ್ಪ ಕರೆಣ್ಣವರ
ಅನುಮೋದಕರು: ಶ್ರೀ ವೀರುಪಾಕ್ಷಪ್ಪ ಮಹದೇವಪ್ಪ ಮೇಟಿ

ಈ ರೀತಿ ಕಾರ್ಯಕಲಾಪಗಳು ಜರುಗಿ ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಸಹಿ/–
ಕಾರ್ಯದರ್ಶಿ
ಕೃ.ಉ.ಮಾ.ಸ.,ಲಕ್ಷ್ಮೇಶ್ವರ

ಸಹಿ/–
ಅಧ್ಯಕ್ಷರು
ಕೃ.ಉ.ಮಾ.ಸ.,ಲಕ್ಷ್ಮೇಶ್ವರ

'ನಕಲು ಪ್ರತಿ'



ಕಾರ್ಯದರ್ಶಿ
ಕೃ.ಉ.ಮಾ.ಸ ಲಕ್ಷ್ಮೇಶ್ವರ